APRIL 11, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಖ್ಯಾತ ಸಮಾಜ ಸುಧಾರಕ,** ಮಹಾನ್ ಸಾಮಾಜಿಕ ಕಾರ್ಯಕರ್ತ, ಮಹಾತ್ಮ ಜ್ಯೋತಿಬಾ ಫುಲೆ ಅವರ, 200ನೇ ಜಯಂತ್ಯುತ್ಸವ ಇಂದು. ದೇಶಾದ್ಯಂತ ಅವರ ಸ್ಮೃತಿಗೆ, ಗೌರವ ನಮನ ಸಲ್ಲಿಸಲಾಗುತ್ತಿದೆ. ಮಹಾತ್ಮ ಫುಲೆ, ತಮ್ಮ ಪತ್ನಿ ಸಾವಿತ್ರಿಬಾಯಿ ಫುಲೆ ಅವರೊಂದಿಗೆ, ಮಹಿಳಾ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ, ಮಹತ್ವದ ಕಾರ್ಯ ಮಾಡಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ತಮ್ಮ ಶ್ರದ್ಧಾ ಸುಮನ ಸಮರ್ಪಿಸಿ, ಸಮಾಜದ ಪ್ರಗತಿಯ ಹಾದಿಯಲ್ಲಿ, ಮಹಾತ್ಮ ಜ್ಯೆತಿಬಾ ಫುಲೆ ಅವರ, ಆಲೋಚನೆಗಳು ಎಲ್ಲರಿಗೂ ಮಾರ್ಗದರ್ಶನ ನೀಡುತ್ತಿರಲಿ, ಎಂದು ಆಶಿಸಿದ್ದಾರೆ.

<><><>

**ಸ್ವಾತಂತ್ರ್ಯ ಹೋರಾಟಕ್ಕೆ,** ಪ್ರೇರಕ ಶಕ್ತಿಯಾಗಿದ್ದ, ಮಹಾನ್ ನಾಯಕಿ, ಕಸ್ತೂರಬಾ ಗಾಂಧಿ, ಅವರ ಜನ್ಮ ದಿನವಾದ ಇಂದು, ಅನೇಕ ಗಣ್ಯರು, ಸಾಮಾಜಿಕ ಮಾಧ್ಯಮಗಳಲ್ಲಿ, ಗೌರವ ನಮನ ಸಲ್ಲಿಸಿದ್ದಾರೆ.

<><><>

**ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ,** ನುಡಿನಮನ ಸಲ್ಲಿಸಿ, ಬಾಪೂಜಿ ಅವರ ಸಹಧರ್ಮಿಣಿಯಾಗಿ, ಕಸ್ತೂರ ಬಾ, ಮೌನವಾಗಿ ಮೌಲ್ಯಗಳನ್ನು ಬಿತ್ತಿದರು. ಹೆಣ್ಣುಮಕ್ಕಳಲ್ಲಿ ಶೈಕ್ಷಣಿಕ ಮನೋಬಲ, ಆತ್ಮವಿಶ್ವಾಸವನ್ನು ತುಂಬಿದವರು, ಎಂದಿದ್ದಾರೆ.

<><><>

**"ಆರೈಕೆ ಅಂತರವನ್ನು, ಕಡಿಮೆ ಮಾಡುವುದು"** ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ಪಾರ್ಕಿನ್ಸನ್ ಅರಿವು ದಿನಾಚರಣೆ. ಪಾರ್ಕಿನ್ಸನ್ ಚಿಕಿತ್ಸೆಯಲ್ಲಿ, ಅಸಮಾನತೆ ಹೋಗಲಾಡಿಸಿ, ಆರೈಕೆಯ ಗುಣಮಟ್ಟವನ್ನು ಸುಧಾರಿಸುವ ಮತ್ತು ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳು ಹಾಗೂ ಕುಟುಂಬದವರಿಗೆ, ಸೂಕ್ತ ಸಹಕಾರ, ಬೆಂಬಲಿಸುವ ವ್ಯವಸ್ಥೆಗಳನ್ನು ಬಲಪಡಿಸುವ ಅಗತ್ಯಕ್ಕೆ, ಈ ದಿನಾಚರಣೆ ಒತ್ತು ನೀಡಿದೆ.

<><><>

**ಈ ತಿಂಗಳ 23 ಮತ್ತು 24ನೇ ತಾರೀಖು ನಡೆಯಲಿರುವ,** ವೃತ್ತಿ ಶಿಕ್ಷಣ ಪ್ರವೇಶಾತಿ, ಸಾಮಾನ್ಯ ಪ್ರವೇಶ ಪರೀಕ್ಷೆ ಸಿ.ಇ.ಟಿ. ಹಾಗೂ 22 ರಂದು ನಡೆಯಲಿರುವ, ಕನ್ನಡ ಭಾ ೨ ಪರೀಕ್ಷೆಗೆ, ಪ್ರವೇಶ ಪತ್ರಗಳನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಡುಗಡೆ ಮಾಡಿದೆ ಎಂದು, ಕಾರ್ಯನಿರ್ವಾಹಕ ನಿರ್ದೇಶಕ, ಎಚ್. ಪ್ರಸನ್ನ ತಿಳಿಸಿದ್ದಾರೆ. ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿರುವ ಅರ್ಹ

ಅಭ್ಯರ್ಥಿಗಳು, KEA ಜಾಲತಾಣಕ್ಕೆ ಭೇಟಿ ನೀಡಿ, ನಿಗದಿತ ಲಿಂಕ್ ಮೂಲಕ, ಹಾಲ್ ಟಿಕೆಟ್ ಡೌನ್ ಲೋಡ್ ಮಾಡಿಕೊಳ್ಳಬಹುದು. ಪ್ರವೇಶಪತ್ರದ ಜೊತೆಗೆ, ವಿದ್ಯಾರ್ಥಿಗಳಿಗೆ ನೀಡಲಾದ ಸೂಚನೆಗಳನ್ನೂ ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಮಾರ್ಗದರ್ಶಿ ಕಾರ್ಯವಿಧಾನಗಳನ್ನು, ಕಟ್ಟುನಿಟ್ಟಾಗಿ ಅನುಸರಿಸಲು, ಅವರು ಸೂಚಿಸಿದ್ದಾರೆ.

<><><>

**ಹೊರನಾಡು ಮತ್ತು ಗಡಿನಾಡು** ಅಭ್ಯರ್ಥಿಗಳಿಗೆ, ಕನ್ನಡ ಭಾ ೆ ಪರೀಕ್ಷೆಯನ್ನು, 22ನೇ ತಾರೀಖು, ಬೆಂಗಳೂರು, ಬೆಳಗಾವಿ ಮತ್ತು ಮಂಗಳೂರು ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತದೆ.

<><><>

**ಧಾರವಾಡದ, ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ,** ಸುವರ್ಣ ಮಹೋತ್ಸವ ಸಂಭ್ರಮದಲ್ಲಿದೆ. 1975 ರಲ್ಲಿ ಸ್ಥಾಪನೆಗೊಂಡ ಈ ಮಹಾವಿದ್ಯಾಲಯದಲ್ಲಿ, ಇಂದು ಮತ್ತು ನಾಳೆ, ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ. ನಾಡಿನ ಖ್ಯಾತ ಕಲಾವಿದರು ಪಾಲ್ಗೊಂಡು, ಪ್ರಾತ್ಯಕ್ಷಿಕೆ, ವಿಚಾರ ಸಂಕಿರಣ ಹಾಗೂ ಚಿತ್ರಕಲಾ ಪ್ರದರ್ಶನ ನಡೆಸಿಕೊಡಲಿದ್ದಾರೆ. ಹಿರಿಯ ಚಿತ್ರಕಲಾವಿದರಿಗೆ, ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳು ಸನ್ಮಾನಿಸಲಿದ್ದಾರೆ ಎಂದು, ಪ್ರಾಚಾರ್ಯ ಎಸ್.ಕೆ. ಪತ್ತಾರ ತಿಳಿಸಿದ್ದಾರೆ.

<><><>

**ಅಡುಗೆ ಅನಿಲ ಸಿಲಿಂಡರ್ ಬಳಸದೆ,** ಗ್ಯಾಸ್ ಸ್ಟೌವ್ ಮಾದರಿಯಲ್ಲೇ, ಜ್ವಾಲೆ ಹರಡುವ, ವಿದ್ಯುತ್ ಸ್ಟೌವ್ ಅನ್ನು, ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ, ಬಿಡುಗಡೆ ಮಾಡಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಅವರು ಮಾಹಿತಿ ನೀಡಿ, ವಿನೂತನ ಮಾದರಿ ಹಾಗೂ ತಂತ್ರಜ್ಞಾನದ, ವಿದ್ಯುತ್ ಒಲೆಯನ್ನು, ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲು, ಸಿದ್ಧತೆ ನಡೆಸಲಾಗುತ್ತಿದೆ. ಅಡುಗೆ ಅನಿಲದ ಕೊರತೆ ನೀಗಿಸಲು, ವಿದ್ಯುತ್ ಸ್ಟೌವ್, ಭಾರತೀಯರಿಗೆ ಸಹಕಾರಿಯಾಗಲಿದೆ, ಎಂದಿದ್ದಾರೆ. ಎಲ್.ಪಿ.ಜಿ.ಗೆ ಪರ್ಯಾಯವಾಗಿ, ದೇಶದೆಲ್ಲೆಡೆ, 50 ಲಕ್ಷ ಪಿ.ಎನ್.ಜಿ ಸಂಪರ್ಕಕ್ಕೆ ಪ್ರಾಶಸ್ತ್ಯ ನೀಡಲಾಗಿದೆ ಎಂದು, ಸಚಿವ ಜೋಶಿ ತಿಳಿಸಿದರು.

<><><>

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ,** ಆಹಾರ ಸುರಕ್ಷತಾ ವಿಭಾಗದ ಅಧಿಕಾರಿಗಳು, ಹೆದ್ದಾರಿ ಬದಿಯ ಡಾಬಾಗಳ ವಿಶೇ ್ ತಪಾಸಣಾ ಅಭಿಯಾನ ಆರಂಭಿಸಿದ್ದಾರೆ. ಬೆಂಗಳೂರಿನ ನೆಲಮಂಗಲದಿಂದ, ಹಾವೇರಿ ವರೆಗಿನ, ರಾಷ್ಟ್ರೀಯ ಹೆದ್ದಾರಿಗಳಲ್ಲಿ, ಒಟ್ಟು 41 ಡಾಬಾಗಳ ತಪಾಸಣೆ ನಡೆಸಿ, ನಿಯಮ ಉಲ್ಲಂಘಿಸಿದವರಿಗೆ, 1 ಲಕ್ಷದ 45 ಸಾವಿರ ರೂಪಾಯಿ ದಂಡ ವಿಧಿಸಿ, 16 ಆಹಾರದ ಮಾದರಿಗಳನ್ನು, ಪರೀಕ್ಷೆಗೆ ಕಳುಹಿಸಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ ತಿಳಿಸಿದ್ದಾರೆ.

<><><>

**ಅರಣ್ಯದ ಪಶು-ಪಕ್ಷಿಗಳಿಗೆ ನೀರೊದಗಿಸುವ,** ಮಾನವೀಯ ಕಾರ್ಯವನ್ನು, ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ, ಬಲಮಂದೆ ಗ್ರಾಮ ಪಂಚಾಯಿತಿ ಕೈಗೊಂಡಿದೆ. ಕೋಲಾರ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಬಿ.ಪ್ರವೀಣ ಬಾಗೇವಾಡಿ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಒಟ್ಟು 156 ಗ್ರಾಮ ಪಂಚಾಯಿತಿಗಳಿದ್ದು, ಎಲ್ಲ ಪಂಚಾಯಿತಿಗಳ ವ್ಯಾಪ್ತಿಯಲ್ಲೂ, ತುರ್ತು ನೀರು ಸರಬರಾಜು ಘಟಕಗಳನ್ನು ನಿರ್ಮಿಸಲಾಗಿದೆ. ಅವುಗಳ ಮೂಲಕ, ವನ್ಯಜೀವಿಗಳಿಗೆ ಕುಡಿಯುವ ನೀರು ಒದಗಿಸಿ, ದಾಹ ತಣಿಸಲಾಗುತ್ತಿದೆ ಎಂದರು.

<><><>

**ಚಿಕ್ಕಬಳ್ಳಾಪುರ ನಗರಕ್ಕೆ,** ಕುಡಿಯುವ ನೀರು ಪೂರೈಸುವ ಜಕ್ಕಲಮಡುಗು ಜಲಾಶಯದ ಪಂಪ್ ಹೌಸ್ ನಲ್ಲಿ, ದುರಸ್ಥಿ ಕಾರ್ಯ ನಡೆದಿದ್ದು, ನೀರು ಪೂರೈಸುವಲ್ಲಿ ನಾಲ್ಕು ದಿನ ವ್ಯತ್ಯಯವಾಗಲಿದೆ ಎಂದು, ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**